

# ರಾಧಿಕಾ ಸಂದೇಶ

'ಸಮಾಜಕ್ಕೆ ಉತ್ತಮ ಸಂದೇಶ ನೀಡುವಂಥ ಪಾತ್ರಗಳನ್ನು ನಿರ್ವಹಿಸುವುದು ನಟಿಯಾಗಿ ನನ್ನ ಜವಾಬ್ದಾರಿ' ಎಂದಿರುವ ನಟಿ ರಾಧಿಕಾ ನಾರಾಯಣ್, ಸಮುದಾಯ ಚಾಲಿತ, ಪ್ರಾದೇಶಿಕ ಸಿನಿಮಾಗಳ ಪ್ರಾಮುಖ್ಯದ ಬಗ್ಗೆ ಮಾತನಾಡಿದ್ದಾರೆ.

'ಜನರು ತಾವು ನೋಡುವ ಸಿನಿಮಾದಲ್ಲಿ ಸಂದೇಶವನ್ನು ಗ್ರಹಿಸುತ್ತಾರೆ. ಹೀಗಾಗಿ ನಾವು ಆರಿಸಿಕೊಳ್ಳುವ ಪಾತ್ರ ಹಾಗೂ ಅದರ ನಿರ್ವಹಣೆ ಬಹಳ ಮುಖ್ಯ' ಎಂದಿದ್ದಾರೆ.

ಸಿನಿಮಾ, ಸಮುದಾಯ ಚಾಲಿತವಾಗಿರಬೇಕು. ನರೇಷನ್ ಕೂಡ ಅದೇ ಧಾಟಿಯಲ್ಲಿ ನಡೆಯಬೇಕು ಎಂಬುದು ಅವರು ಒತ್ತಿ ಹೇಳುವ ಅಂಶ. 'ಸಿನಿಮಾದಲ್ಲಿ ಹೊಸ ಪ್ರತಿಭೆಗೆ ಅವಕಾಶ ನೀಡಬೇಕು. ಕಥೆ ಪ್ರಾದೇಶಿಕವಾಗಿ ಕನೆಕ್ಟ್ ಆಗಬೇಕು. ನಟ ನಟಿಯರಿಗಿಂತ ಕಥೆಯೇ ಮುಖ್ಯ' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸಿನಿಮಾ ಮೇಕಿಂಗ್‌ನಲ್ಲಿ ಪ್ರೇಕ್ಷಕರೆಡೆಗಿನ ಜವಾಬ್ದಾರಿ ಕುರಿತು ಮಾತು ಹಂಚಿಕೊಂಡಿರುವ ಅವರು, 'ನೋಟ, ದೃಶ್ಯಗಳ ಹೊರತಾಗಿ ಪ್ರತಿ ಸಿನಿಮಾದಲ್ಲಿಯೂ ಸಂದೇಶವೊಂದು ಇರುತ್ತದೆ. ಹೀಗಾಗಿ ಕಲಾವಿದರು ಉತ್ತಮ ಸಂದೇಶ ನೀಡುವಂಥ ಪಾತ್ರಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಅಭಿಮಾನಿಗಳು ಅನುಕರಿಸುವ ಸಾಧ್ಯತೆ ಇರುವುದರಿಂದ ಎಚ್ಚರಿಕೆಯ ನಡೆ ನಮ್ಮದಾಗಿರಬೇಕು' ಎಂದು ಹೇಳಿದ್ದಾರೆ.

ಸಿನಿಮಾದಲ್ಲಿ ನಟಿಯರ ಪ್ರಾತಿನಿಧ್ಯದ ಕುರಿತೂ ಮಾತನಾಡಿ, 'ಈ ಹಿಂದೆ ಜನರು ಉತ್ತಮ ನಟಿಯರನ್ನು ಗುರುತಿಸುತ್ತಿದ್ದರು. ಆಗ ಕಾದಂಬರಿಗಳನ್ನು ಸಿನಿಮಾಗಳಾಗಿ ರೂಪಿಸಲಾಗುತ್ತಿತ್ತು. ಅದರಲ್ಲಿ ಮಹಿಳೆಯರ ಪಾತ್ರವೇ ಮುನ್ನೆಲೆಯಲ್ಲಿರುತ್ತಿತ್ತು. ಈಗ ಮಹಿಳೆಯರನ್ನು ವಸ್ತುನಿಷ್ಠ ಮಾಡಲಾಗುತ್ತಿದೆ. ಹೀಗೆ ಮಾಡುವುದನ್ನು ನಿಲ್ಲಿಸಿದಾಗ ಸಿನಿಮಾದಲ್ಲಿ ಮಹಿಳೆಯರ ಪ್ರಾತಿನಿಧ್ಯಕ್ಕೆ ಸಂಬಂಧಿಸಿದಂತೆ ಮೊದಲ ಹೆಜ್ಜೆ ಇಟ್ಟಂತೆ' ಎಂದಿದ್ದಾರೆ.

ಸದ್ಯ ದಿಗಂತ್ ಮಂಚಾಲೆ ಹಾಗೂ ರಮೇಶ್ ಅರವಿಂದ್ ಅವರೊಂದಿಗೆ 'ದೈಜಿ' ಸಿನಿಮಾ ಹಾಗೂ ಪಿ.ಸಿ. ಶೇಖರ್ ನಿರ್ದೇಶನದ 'ಮಹಾನ್' ಸಿನಿಮಾದಲ್ಲಿಯೂ ವಿಜಯ್ ರಾಘವೇಂದ್ರ ಅವರೊಂದಿಗೆ ನಟಿಸುತ್ತಿದ್ದಾರೆ ರಾಧಿಕಾ. ■

# ವರ್ಷಾಂತ್ಯಕ್ಕೆ ಕಿಚ್ಚನ ಸಿನಿಮಾ?



ಇದೇ ವರ್ಷ ಅಭಿಮಾನಿಗಳಿಗೆ ಸಿನಿಮಾವೊಂದನ್ನು ನೀಡುವುದಾಗಿ ನಟ ಸುದೀಪ್ ಹೇಳಿದ್ದಾರೆ. 'ಮ್ಯಾಕ್ಸ್' ಸಿನಿಮಾ ನಿರ್ದೇಶಕ ವಿಜಯ್ ಕಾರ್ತಿಕೇಯನ್ ಜೊತೆ 'ಕಿಚ್ಚ 47' ಪ್ರಾಜೆಕ್ಟ್‌ಗೆ ಸುದೀಪ್ ಸಹಿ ಹಾಕಿದ್ದು, ಇದು ಅವರ 47ನೇ ಸಿನಿಮಾ. ಹೈ ಆ್ಯಕ್ಷನ್ ಥ್ರಿಲ್ಲರ್ ಕಥಾಹಂದರದ ಸಿನಿಮಾ ಇದಾಗಿದೆ. ಸದ್ಯ ಅನೂಪ್ ಭಂಡಾರಿ ನಿರ್ದೇಶನದ 'ಬಿಲ್ಲ ರಂಗ ಭಾಷಾ' ಸಿನಿಮಾದಲ್ಲಿಯೂ ಬ್ಯುಸಿಯಾಗಿದ್ದಾರೆ ಸುದೀಪ್.

''ಬಿಲ್ಲ ರಂಗ ಭಾಷಾ' ಸಿನಿಮಾ ಮಾಸಿವ್ ಆಗಿದ್ದು, ಸಮಯ ಹಿಡಿಯುತ್ತದೆ. 'ಕಿಚ್ಚ47' ಅನ್ನು ಈ ವರ್ಷವೇ ತೆರೆಗೆ ತರುವ ಆಲೋಚನೆಯಿದೆ'' ಎಂದು ಮಾಹಿತಿ ನೀಡಿದ್ದಾರೆ. ಈ ಹೊಸ ಸಿನಿಮಾ, 'ಮ್ಯಾಕ್ಸ್' ಸಿನಿಮಾದ ಸೀಕ್ವೆಲ್ ಆಗಿರದೇ, ಸಂಪೂರ್ಣ ಭಿನ್ನವಾದ ಪಾತ್ರ ಹಾಗೂ ಟೋನ್ ಇದೆ ಎಂದು ಚಿತ್ರತಂಡ ಹೇಳಿಕೊಂಡಿದೆ.

ತಮ್ಮ ಬಳಿ ಬರುತ್ತಿರುವ ಸ್ಕ್ರಿಪ್ಟ್‌ಗಳ ಕುರಿತು ಮಾತನಾಡಿರುವ ಸುದೀಪ್, 'ಹಲವು ಸ್ಕ್ರಿಪ್ಟ್‌ಗಳನ್ನು ಕೇಳಿದ್ದೇನೆ. ನನ್ನನ್ನು ಗುರಿಯಾಗಿಟ್ಟುಕೊಂಡು ಕಥೆ ಬರದವರನ್ನು ನಾನು ಎಂದಿಗೂ ನಿರ್ಲಕ್ಷಿಸಿಲ್ಲ. ಕೆಲವು ಕಥೆಗಳು ನನಗೆ ಸೂಟ್ ಆಗುವುದಿಲ್ಲ. ಆದರೆ ಅದಕ್ಕೆ ಒಪ್ಪುವಂಥ ನಟರನ್ನು ಶಿಫಾರಸು ಮಾಡುತ್ತೇನೆ' ಎಂದಿದ್ದಾರೆ.

# ಹೊಸ ಕವಲಿನಲ್ಲಿ ಲವ್ ಮಾಕ್ಟೇಲ್



'ಲವ್ ಮಾಕ್ಟೇಲ್' ಸಿನಿಮಾದಿಂದ ನಿರ್ದೇಶನಕ್ಕೆ ಕಾಲಿಟ್ಟವರು ನಟ ಡಾರ್ಲಿಂಗ್ ಕೃಷ್ಣ. 2020ರಲ್ಲಿ ತೆರೆಕಂಡ ಈ ಸಿನಿಮಾ ಹಿಟ್ ಆಗಿದ್ದು ಮಾತ್ರವಲ್ಲ, ಎರಡು ವರ್ಷಗಳ ಅಂತರದಲ್ಲಿ 'ಲವ್ ಮಾಕ್ಟೇಲ್ 2' ಕೂಡ ತೆರೆಕಂಡು ಕೃಷ್ಣ– ಮಿಲನಾ ಜೋಡಿಯೂ ಜನಪ್ರಿಯವಾಯಿತು.

ಇದೀಗ ಅದೇ ಸರಣಿಯಲ್ಲಿ ಮೂರನೇ ಸಿನಿಮಾ ಮೂಡಿಬರುತ್ತಿದೆ. ಕೃಷ್ಣ ಟಾಕೀಸ್ ಅಡಿಯಲ್ಲಿ 'ಲವ್ ಮಾಕ್ಟೇಲ್ 3' ಸಿನಿಮಾ ಚಿತ್ರೀಕರಣ ಆರಂಭಗೊಂಡಿದೆ.

ಹಿಂದಿನ ಎರಡು ಸಿನಿಮಾಗಳು ಗಂಡು–ಹೆಣ್ಣಿನ ನಡುವಿನ ಪ್ರೀತಿಯ ಬಗ್ಗೆ ಹೇಳಿದರೆ, ಈ ಭಾಗದಲ್ಲಿ ಕಥೆ ತಿರುವು ಪಡೆದಿದ್ದು, ಅಪ್ಪ–ಮಗಳ ಬಾಂಧವ್ಯದ ಬಗ್ಗೆ ಹೇಳಲು ಹೊರಟಿದೆಯಂತೆ. ಸಿನಿಮಾ ಬಗ್ಗೆ ಮಾತನಾಡಿರುವ ಡಾರ್ಲಿಂಗ್ ಕೃಷ್ಣ, 'ಇದು ನನ್ನ ಹೃದಯಕ್ಕೆ ಹತ್ತಿರವಾದ ಪ್ರಾಜೆಕ್ಟ್. ಈ ಸಿನಿಮಾಗಳು ಜನರಿಂದ ನನಗೆ ಮೆಚ್ಚುಗೆ ತಂದವು. ಮೂರನೇ ಸರಣಿ, ಎಮೋಷನಲ್ ಫ್ಯಾಮಿಲಿ ಡ್ರಾಮಾ. ತಂದೆ– ಮಗಳ ಸಂಬಂಧ ಇದರ ಕಥಾವಸ್ತು' ಎಂದು ಮಾಹಿತಿ ನೀಡಿದ್ದಾರೆ. ■